# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 608
ಸದಸ್ಯರ ಹೆಸರು : ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ (ಶಿಕ್ಷಕರ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ : 11-07-2023
ಉತ್ತರಿಸುವ ಸಚಿವರು : ಮಾನ್ಯ ಇಂಧನ ಸಚಿವರು

***

| | ಪ್ರಶ್ನೆ | ಉತ್ತರ |
|---|---|---|
| (ಅ) | ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿಯು ವಿದ್ಯುತ್ ಮಗ್ಗಗಳ ಮೂಲಕ ಬಟ್ಟೆ ನೇಯುತ್ತಿದ್ದ ಘಟಕಗಳಿಗೆ ಪೂರೈಸುತ್ತಿರುವ ವಿದ್ಯುತ್‌ಗೆ ಬಿಲ್‌ನ ಮೊತ್ತದ ಶೇ.55 ರಷ್ಟು ಹೆಚ್ಚಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? | ಮಾನ್ಯ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಆದೇಶ ದಿನಾಂಕ: 12.05.2023 ರ ಪ್ರಕಾರ ದಿನಾಂಕ: 01.04.2023 ರಿಂದ ಅಥವಾ ತದ ನಂತರದ ಮೊದಲ ಮಾಪಕ ಓದುವ ದಿನಾಂಕದಿಂದ ಬಳಸುವ ವಿದ್ಯುತ್ ಗೆ ದರ ಪರಿಷ್ಕರಿಸಲಾಗಿದೆ.<br>1. ಕೆ.ಇ.ಆರ್.ಸಿ. (ಇಂಧನ ಮತ್ತು ವಿದ್ಯುತ್ ಖರೀದಿ ವೆಚ್ಚ ಹೊಂದಾಣಿಕ ಶುಲ್ಕ) ನಿಯಮಾವಳಿಗಳು 2023ರ ಪ್ರಕಾರ ಫೆಬ್ರುವರಿ 2023 ರಿಂದ ಏಪ್ರಿಲ್ 2023 ರ ವರೆಗಿನ ಅವಧಿಯ ಇಂಧನ ಮತ್ತು ವಿದ್ಯುತ್ ಖರೀದಿ ವಚ್ಚ ಹೊಂದಾಣಿಕೆ ಶುಲ್ಕರೂ 2.55 ಪ್ರತಿ ಯೂನಿಟ್‌ಗೆ ವಿಧಿಸಿರುವುದರಿಂದ ಹೆಚ್ಚಿನ ಬಿಲ್ಲ್ ಮೊತ್ತ ಬಂದಿರುತ್ತದೆ.<br>2. ನಿಯಮಾನುಸಾರ 20 ಹೆಚ್ ಪಿ ವರೆಗಿನ ವಿದ್ಯುತ್ ಚಾಲಿತ ಮಗ್ಗಗಳ ಸ್ಥಾವರಗಳಿಗೆ ಒಂದು ಯೂನಿಟ್‌ಗೆ ರೂ. 1.25 ದರ ನಿಗದಿಪಡಿಸಿ ಹಾಲಿ ಜಾರಿಯಲ್ಲಿರುವ ವಿದ್ಯುತ್ ದರ ಹಾಗೂ ಸಬ್ಸಿಡಿ ದರ ಇವುಗಳ ವ್ಯತ್ಯಾಸದ ಮೊತ್ತವನ್ನು ಹೆಸ್ಕಾಂಗೆ ಸರ್ಕಾರ ಪಾವತಿಸಲು ಆದೇಶಿಸಿರುತ್ತದೆ. |
| (ಆ) | ಬಂದಿದ್ದಲ್ಲಿ, ವಿದ್ಯುತ್ ಮಗ್ಗ ಘಟಕಗಳ ವಿದ್ಯುತ್ ಬಿಲ್ ಏಕಾಏಕಿ ಹೆಚ್ಚಿಸಿರುವುದರಿಂದ ವಿದ್ಯುತ್ ಮಗ್ಗಗಳ ಘಟಕಗಳಿಗೆ ಉಂಟಾಗಿರುವ ತೊಂದರೆಯನ್ನು ನಿವಾರಿಸಲು ಸರ್ಕಾರವು ಯಾವ ಕ್ರಮ ಕೈಗೊಂಡಿದೆ : | ಜಕಾತಿ ದರಗಳಲ್ಲಿ ಏನೇ ಹೆಚ್ಚಾದರೂ ವಿದ್ಯುತ್ ಮಗ್ಗ ಘಟಕಗಳು ಪ್ರತಿ ಯೂನಿಟ್‌ಗೆ ರೂ.1.25 ಮಾತ್ರ ಭರಿಸುತ್ತಿದ್ದು, ಉಳಿದ ಮೊತ್ತವನ್ನು ಸರ್ಕಾರವು ಸಹಾಯಧನದ ರೂಪದಲ್ಲಿ ಒದಗಿಸುತ್ತಿರುವುದರಿಂದ, ಘಟಕಗಳಿಗೆ ಯಾವುದೇ ಹೊರೆಯಾಗುತ್ತಿಲ್ಲ. |
| (ಇ) | ಶೇ.55 ರಷ್ಟು ವಿದ್ಯುತ್ ಬಿಲ್ ಹೆಚ್ಚಳದಿಂದ ಘಟಕಗಳ ಮಾಲೀಕರು ಘಟಕಗಳನ್ನು ಮುಚ್ಚಲು ನಿರ್ಧರಿಸುವುದರಿಂದ ಈ ಘಟಕಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಕಾರ್ಮಿಕರ ಕುಟುಂಬಗಳಿಗೆ ತೊಂದರೆಯಾಗುವುದನ್ನು ತಡೆಗಟ್ಟಲು ಸರ್ಕಾರವು ಯಾವ ಕ್ರಮ ಕೈಗೊಳ್ಳುತ್ತಿದೆ? | |

ಸಂಖ್ಯೆ: ಎನರ್ಜಿ 151 ಇಬಿಎಸ್ 2023

(ಕೆ.ಜೆ.ಜಾರ್ಜ್)
ಇಂಧನ ಸಚಿವರು